ಇದೇ ರೀತಿಯಾಗಿ ಹುಣಸಿಹಾಳಹುಡಾ ಪುನರ್ ವಸತಿ ಗ್ರಾಮದಲ್ಲಿ ಕಪ್ಪು ಮಣ್ಣಿನಲ್ಲಿ 337 ಮನೆಗಳನ್ನು ನಿರ್ಮಿಸುತ್ತಿದ್ದು, ಈ ಪೈಕಿ ಕೇವಲ 5-6 ಮನೆಗಳಲ್ಲಿ ಬಿರುಕು ಬಂದಿರುವುದರಿಂದ, ಜಂಟಿ ನಿರ್ದೇಶಕರು, ಕರ್ನಾಟಕ ಭೂ ಸೇನಾ ನಿಗಮ, ರಾಯಚೂರು ರವರು ಸಂಬಂಧಿಸಿದ ಅಭಿಯಂತರರನ್ನು ಅಮಾನತ್‌ಗೊಳಿಸಿರುತ್ತಾರೆ. ಅಲ್ಲದೇ ಈ ಮನೆಗಳನ್ನು ಕಪ್ಪು ಭೂಮಿಯಲ್ಲಿ ನಿರ್ಮಾಣ ಮಾಡಿರುವುದರಿಂದ ಈ ಕುರಿತು ಹೆಚ್ಚಿನ ತಂತ್ರಜ್ಞಾನದ ಅಭಿಪ್ರಾಯಕ್ಕಾಗಿ ಟಿ.ಆರ್.ಎಫ್ (Tor Steel Research Foundation in India, Bangalore) ರವರನ್ನು ಕೋರಲಾಗಿದೆ.

ಭೂ ಸುಧಾರಣಾ ಕಾಯಿದೆ ತಿದ್ದುಪಡಿ

928(933) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೃಷಿಯೇತರರು ಕೃಷಿ ಭೂಮಿಯನ್ನು ಖರೀದಿಸಲು ಇರುವ ಕಾನೂನಿನ ನಿರ್ಬಂಧ ಗೃಹ ಉದ್ಯಮದ ಪ್ರಗತಿಗೆ ತೊಡಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಕರ್ನಾಟಕ ಭೂ ಸುಧಾರಣಾ; ಕಾಯಿದೆ ತಿದ್ದುಪಡಿ ಮಾಡಲು ಸರ್ಕಾರ ಉದ್ದೇಶಿಸಲಾಗಿದೆಯೇ: ಇದಕ್ಕೆ ಗರಿಷ್ಟ ಕಾಲ ಮಿತಿಯನ್ನು ಏನಾದರೂ ನಿಗದಿಪಡಿಸಿಕೊಂಡಿದೆಯೇ?

ಶ್ರೀ ಹೆಚ್.ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

1) ಇಲ್ಲ.

2) ಉದ್ಭವಿಸುವುದಿಲ್ಲ.

ಬೆಂಗಳೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಯಾತ್ರಿ ನಿವಾಸ್ ವಸತಿ ಗೃಹಗಳು

929 (934) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೆಂಗಳೂರು ಕೇಂದ್ರ ಬಸ್ ನಿಲ್ದಾಣದಲ್ಲಿ ಯಾತ್ರಿ ನಿವಾಸ್ ವಸತಿಗೃಹವನ್ನು ಬಾಡಿಗೆ ನೀಡಲಾಗಿದೆಯೆ;

ಆ) ಯಾರಿಗೆ ಗುತ್ತಿಗೆ ನೀಡಲಾಗಿದೆ;

ಇ) ಗುತ್ತಿಗೆ ಅವಧಿ ಎಷ್ಟು;

ಈ) ನಿಗಧಿತ ಮಾಹೆಯಾನ : ವಾರ್ಷಿಕ ಹಣ ಎಷ್ಟು;

ಉ) ಈ ಒಪ್ಪಂದ ಮಾಡಿಕೊಳ್ಳುವ ಮುನ್ನ ಸಾರ್ವಜನಿಕ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿದ್ದೀರಾ?

ಊ) ಭಾಗವಹಿಸಿದವರ ವಿವರ ನೀಡುವುದು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು

ಆ) ಇದನ್ನು ಮೆ॥ ಬೃಂದಾವನ ಎಂಟರ್‌ಪ್ರೈಸಸ್, ಬೆಂಗಳೂರು ರವರಿಗೆ ನೀಡಲಾಗಿದೆ.

ಇ) ಇದರ ಗುತ್ತಿಗೆ ಅವಧಿಯು 3 ವರ್ಷಗಳು ದಿನಾಂಕ: 28-4-1999 ರಿಂದ ಜಾರಿಗೆ ಬರುವಂತೆ ನೀಡಲಾಗಿದೆ.

ಈ) ಹಾಲಿ ಪಾವತಿಸುತ್ತಿರುವ ಮಾಸಿಕ ಪರವಾನಗಿ ಶುಲ್ಕ ರೂ. 1,08,351-00ಗಳು ಮತ್ತು ವರ್ಷದ ಪರವಾನಗಿ ಶುಲ್ಕ ರೂ. 13, 00, 212-00 ಗಳು

ಉ) ಹೌದು.

ಊ) ಟೆಂಡರ್‌ನಲ್ಲಿ ಎಂಟು ಜನ ಅಭ್ಯರ್ಥಿಗಳೂ ಭಾಗವಹಿಸಿದ್ದು ವಿವರಗಳು ಈ ಕೆಳಕಂಡಂತಿವೆ..

ಕ್ರಮ ಸಂಖ್ಯೆ	ಟೆಂಡರ್‌ದಾರರ ಹೆಸರು	ಸೂಚಿಸಿದ್ದ ಮೊತ್ತ	ಷರಾ
1	2	3	4
1.	ಶ್ರೀ ವರಸಿದ್ದಿ ವಿನಾಯಕ ವಿನಾಯಕ ಎಂಟರ್‌ಪ್ರೈಸಸ್, ಬೆಂಗಳೂರು	1,04,256-00	ಟೆಂಡರ್ ನಿಯಮಗಳನ್ನು ಪಾಲಿಸದೆ ಮತ್ತು ಷರತ್ತಿನ್ನೊಳಗೊಂಡ ಟೆಂಡರ್ ಸಲ್ಲಿಸಿದ್ದರು.
2.	ಮೆ: ಶ್ರೀ ಬೃಂದಾವನ ಎಂಟರ್‌ಪ್ರೈಸಸ್, ಬೆಂಗಳೂರು.	98,501-00	ಪರವಾನಗಿದಾರರನ್ನಾಗಿ ಆಯ್ಕೆ ಮಾಡಿದೆ.
3.	ಶ್ರೀ ಕೃಷ್ಣ ಅಸೋಸಿಯೇಟ್ಸ್ ಬೆಂಗಳೂರು.	81,000-00	ಟೆಂಡರ್ ನಿಯಮಗಳನ್ನು ಪಾಲಿಸಿರುವುದಿಲ್ಲ
4.	ಶ್ರೀ ತಲ್ಲಂ ರಾಜೀವ್ ಬೆಂಗಳೂರ	65,101-00	ಟೆಂಡರ್ ನಿಯಮಗಳನ್ನು ಪಾಲಿಸಿರುವುದಿಲ್ಲ.
5.	ಶ್ರೀ ಎ.ಸೋಮ ಸುಂದರಮ್, ಬೆಂಗಳೂರು.	55,000-00	--''--

1	2	3	4
6.	ಶ್ರೀ ವೈ.ಶ್ರೀಧರ್ ಬೆಂಗಳೂರು.	54,600-00	--''--
7.	ಶ್ರೀ ಎಸ್.ಆರ್. ಗೋಪಾಲ್, ಬೆಂಗಳೂರು.	51,000-00	--''--
8.	ಮೆ: ಬೆಂಗಳೂರು ಸಿಟಿ ಜಿಲ್ಲಾ ಮಹಿಳಾ ವಿವಿದ್ದೋದ್ದೇಶ ಕೋ- ಆಪರೇಟೀವ್ ಸೊಸೈಟಿ, ಬೆಂಗಳೂರು.	50,000-00	--''--

ರಾಜ್ಯದಲ್ಲಿ ತೆಂಗು ಕೊಬ್ಬರಿ ಬೆಲೆ ಕುಸಿದಿರುವುದು.

931(1328) ಶ್ರೀ ಕೃಷ್ಣಮೂರ್ತಿ ಕೆ.ಎಂ.(ಕಡೂರು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚೆಗೆ ತೆಂಗು ಹಾಗೂ ಕೊಬ್ಬರಿ ಬೆಲೆ ಕುಸಿತದಿಂದ ರೈತರು ಅತೀವ ಸಂಕಷ್ಟಕ್ಕೆ ಗುರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಪ್ರಕರಣವನ್ನು ಸರಿಯಾಗಿಸಲು ರೈತರಿಗೆ ಬೆಂಬಲ ಬೆಲೆ ನೀಡಲು ಸರ್ಕಾರ ಯೋಚಿಸಿದೆಯೇ, ಬೆಂಬಲ ಬೆಲೆ ನೀಡಲು ಸರ್ಕಾರ ಇದುವರೆವಿಗೂ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿದೆ.

ಆ) ತೆಂಗಿಗೆ ಬೆಂಬಲ ಬೆಲೆ ಇರುವುದಿಲ್ಲ. ಆದರೆ ಕೊಬ್ಬರಿಗೆ ಬೆಂಬಲ ಬೆಲೆ ನೀಡಲಾಗುತ್ತಿದೆ. ರೂ. 1224.39 ಲಕ್ಷ.

ತುರುವೇಕೆರೆ ತಾಲ್ಲೂಕು ಕಣತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಗೋಪಾಲಪುರದಲ್ಲಿ ಸೈಟ್ ಮಂಜೂರು ಮಾಡಿರುವುದು

932 (939) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?